
ಪರವಾಗಿಲ್ಲ,' ಅಂತ ಒತ್ತಾಯ ಮಾಡಿದೆ. ಅದಕ್ಕೆ ಅವಳು, 'ದಿಂಬು ತಿರುವಿ ಹಾಕಿದರೆ ನಾವು ಮತ್ತೆ ಭೇಟಿ ಆಗುತ್ತೇವೆ, ನಿಜ. ಆದರೂ ಎಚ್ಚರ ಆದಾಗ ನೀನು ಎಲ್ಲಾ ಮರೆತಿರತೀಯ,' ಅಂದಳು. ಮೂಲೆ ಕಡೆಗೆ ಹೆಜ್ಜೆ ಹಾಕಿದೆ. ಅವಳು ದೀಪದ ಉರಿಯ ಮೇಲೆ ಕೈ ಕಾಯಿಸಿಕೊಳ್ಳುತ್ತಾ ಅಲ್ಲೇ ಉಳಿದಳು. ನಾನು ಕುರ್ಚಿಯ ಹತ್ತಿರಕ್ಕೆ ಹೋಗುವ ಮೊದಲೇ ಅವಳು ನನ್ನ ಹಿಂದೆ ಹೇಳಿದ ಮಾತು ಕೇಳಿಸಿತು: 'ರಾತ್ರಿ ಸರುಹೊತ್ತಿನಲ್ಲಿ ಎಚ್ಚರವಾದಾಗ ಹೊರಳಾಡತಾ ಇರತೇನೆ, ದಿಂಬಿನ ಅಂಚು ಮೊಳಕಾಲನ್ನ ಸುಡತಾ ಇರತ್ತೆ ಬೆಳಗಿನ ಜಾವದವರೆಗೂ, 'ನೀಲಿ ನಾಯೀ ಕಣ್ಣು' ಅನ್ನುತಾ ಇರುತ್ತೇನೆ,' ಅಂದಳು.

ಆಮೇಲೆ ಗೋಡೆಗೆ ಮುಖ ಮಾಡಿಕೊಂಡೇ ಇದ್ದೆ. 'ಬೆಳಕು ಹರೀತಾ ಇದೆ, ಎರಡು ಹೊಡೆದಾಗ ಎಚ್ಚರವಾಗಿತ್ತು. ಎಷ್ಟೋ ಹೊತ್ತಾಯಿತು,' ಅಂತ ಅವಳ ಕಡೆ ನೋಡದೆ ಹೇಳಿದೆ. ಬಾಗಿಲ ಹತ್ತಿರ ಹೋದೆ. ಬಾಗಿಲ ಹಿಡಿಯ ಮೇಲೆ ಕೈ ಇಟ್ಟಾಗ ಅವಳ ದನಿ ಮತ್ತೆ ಅದೇ ಥರ ಕೇಳಿಸಿತು: 'ಬಾಗಿಲು ತೆಗೀ ಬೇಡ. ಹಾಲ್‌ನ ತುಂಬಾ ಕಷ್ಟಕೊಡುವ ಕನಸು ಇವೆ,' ಅಂದಳು. ಬಾಗಿಲ ಹಿಡಿಯ ಮೇಲೆ ಕೈ ಇಟ್ಟಾಗ ಅವಳ ದನಿ ಮತ್ತೆ ಅದೇ ಥರ ಕೇಳಿಸಿತು: 'ಬಾಗಿಲು ತೆಗೀಬೇಡ. ಆ ಪ್ಯಾಸೇಜಿನ ತುಂಬಾ ಕಷ್ಟಕೊಡುವ ಕನಸು ಇವೆ,' ಅಂದಳು. ಅದಕ್ಕೆ ನಾನು, 'ನಿನಗೆ ಹೇಗೆ ಗೊತ್ತು?' ಅಂತ ಕೇಳಿದೆ. 'ಸ್ವಲ್ಪ ಮುಂಚೆ ಅಲ್ಲಿದ್ದೆ, ಸುಮ್ಮನೆ ನನ್ನ ಬಗ್ಗೇನೇ ಯೋಚನೆ ಮಾಡತಾ ಇದ್ದೇನೆ ಅಂತ ಅನ್ನಿಸಿ ಎಚ್ಚರವಾದೆ,' ಅಂದಳು. ನಾನು ಹಿಡಿಕೆ ಅರ್ಧ ತಿರುಗಿಸಿದ್ದೆ. ಸ್ವಲ್ಪ ತಳ್ಳಿದ ತಕ್ಷಣ ತಣ್ಣನೆ ಗಾಳಿ ನುಸುಳಿ ಬಂದಿತ್ತು. ಉಳುಮೆ ಮಾಡಿದ ನೆಲದ ತಾಜಾ ವದ್ದೆ ಪರಿಮಳವಿತ್ತು. ಮತ್ತೆ ಮಾತಾಡಿದಳು. ಹಿಡಿಕೆ ತಿರುಗಿಸಿದೆ. ಬಾಗಿಲು ನಿಶ್ಶಬ್ದವಾಗಿ ತೆರೆಯುತ್ತಾ, 'ಇಲ್ಲಿ ಹೊರಗೆ ಯಾವ ಪ್ಯಾಸೇಜೂ ಇಲ್ಲ. ಹಳ್ಳಿಯ ಜಮೀನಿನ ವಾಸನೆ ಬರತಾ ಇದೆ,' ಅಂದೆ. 'ನಿನಗಿಂತ ಚೆನ್ನಾಗಿ ನನಗೆ ಗೊತ್ತು. ಏನಂದರೆ ಅಲ್ಲಿ ಯಾರೋ ಹೆಂಗಸು ಹಳ್ಳಿ ಊರಿನ ಕನಸು ಕಾಣುತ್ತಿದ್ದಾಳೆ,' ಅಂತ ಸ್ವಲ್ಪ ದೂರದಿಂದ ಹೇಳಿದಳು. ದೀಪದ ಕುಡಿಯ ಮೇಲೆ ಇದ್ದ ಕೈಯ ಮೇಲೆ ಇನ್ನೊಂದು ಕೈ ಇಟ್ಟುಕೊಂಡಳು. 'ಹಳ್ಳೀಲಿ ಮನೆ ಮಾಡಬೇಕು ಅಂತ ಅವಳಿಗೆ ತುಂಬ ಆಸೆ ಇತ್ತು. ಆದರೂ ಸಿಟಿ ಬಿಟ್ಟು ಹೋಗಕ್ಕಾಗಲೇ ಇಲ್ಲ,' ಅಂದಳು. ನೆನಪಾಯಿತು. ಹಿಂದೆ ಯಾವುದೋ ಕನಸಿನಲ್ಲಿ ಒಂದು ಸಲ ಆ ಹೆಂಗಸನ್ನು ನೋಡಿದ್ದೆ. ಈಗ, ಬಾಗಿಲು ಅರ್ಧ ತೆರೆದಿದೆಯಲ್ಲಾ. ಇನ್ನರ್ಧ ಗಂಟೆಯೊಳಗೆ ಬ್ರೇಕ್‌ಫಾಸ್ಟ್‌ಗೆ ಕೆಳಕ್ಕೆ ಇಳಿದು ಹೋಗಬೇಕು ನಾನು ಅನ್ನೋದು ಗೊತ್ತಿತ್ತು.



'ಏನಾದರೂ ಆಗಲಿ, ನನಗೆ ಎಚ್ಚರ ಆಗಬೇಕಾದರೆ ಇಲ್ಲಿಂದ ಹೋಗಲೇಬೇಕು ನಾನು,' ಅಂದೆ.

ಹೊರಗೆ ಗಾಳಿ ಒಂದು ಕ್ಷಣ ಬೀಸಿ ಮತ್ತೆ ಸುಮ್ಮನಾಯಿತು. ಆಮೇಲೆ ನಿದ್ದೆ ಮಾಡುತ್ತಿರುವವರು ಯಾರೋ ಹಾಸಿಗೆಯಲ್ಲಿ ಹೊರಳಿದ ಸದ್ದು ಕೇಳಿಸಿತು. ಹೊಲದಿಂದ ಬೀಸುವ ಗಾಳಿ ನಿಂತಿತ್ತು. ಯಾವ ಪರಿಮಳವೂ ಇರಲಿಲ್ಲ. 'ನಾಳೆ. ಅದರಿಂದಲೇ ನಿನ್ನ ಗುರುತು ಹಿಡೀತೇನೆ, ಯಾರೋ ಹೆಂಗಸು ಗೋಡೆಯ ಮೇಲೆ 'ನೀಲಿ ನಾಯೀ ಕಣ್ಣು' ಅಂತ ಬರೆಯುವಾಗ ನಿನ್ನ ಪತ್ತೆ ಆಗತ್ತೆ,' ಅಂದೆ. ನಕ್ಕಳು. ಅಸಾಧ್ಯವಾದುದಕ್ಕೆ, ಕೈ ಚಾಚಿ ಹಿಡಿಯಲಾರದಂಥಕ್ಕೆ ಶರಣಾದಂಥ ದುಃಖ ಆಗಲೇ ಆ ನಗುವಿಗೆ ಬಂದಿತ್ತು. 'ನನ್ನ ಕಂಡರೂ ಬೆಳಗಿನ ಹೊತ್ತಿನಲ್ಲಿ ನಿನಗೆ ಏನೂ ನೆನಪು ಇರಲ್ಲ,' ಅಂದಳು. ದೀಪದ ಮೇಲೆ ಮತ್ತೆ ಎರಡೂ ಕೈ ಚಾಚಿದಳು. ಅವಳ ಆಕಾರಕ್ಕೆ ಕಪ್ಪು ಮೋಡ ಮುಸುಕಿತ್ತು. 'ಏನು ಕನಸು ಕಂಡೆ ಅನ್ನೋದನ್ನ ಎಚ್ಚರವಾದ ತಕ್ಷಣ ಮರೆಯುವವನು ನೀನೊಬ್ಬನೇ' ಅಂದಳು.

●